# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011"ರ ಅನುಷ್ಠಾನಕ್ಕಾಗಿ ಹಾಗೂ ಹೆಚ್ಚಿನ ಜನಜಾಗೃತಿಯ ನಿಟ್ಟಿನಲ್ಲಿ ವಿವಿಧ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಹಾಗೂ ರೇಡಿಯೋ ಚಾನೆಲ್‌ಗಳಲ್ಲಿ ಸಕಾಲ ಕಾರ್ಯಕ್ರಮ ಪ್ರಸರಣದ ವೆಚ್ಚವನ್ನು ವಾರ್ತಾ ಇಲಾಖೆಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಅಧಿಸೂಚನೆ ಸಂಖ್ಯೆ:ಸಿಆಸುಇ 28 ಇಕಾಅ 2012, ದಿನಾಂಕ: 28ನೇ ಮಾರ್ಚ್ 2012.
2. ಆದೇಶ ಸಂಖ್ಯೆ: ಸಿಆಸುಇ 20 ಇಕಾಅ 2012, ದಿನಾಂಕ: 06.03.2012.
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆ.ಇ.663 ವೆಚ್ಚ-7/2013, ದಿನಾಂಕ: 26.10.2013
4. ವಾರ್ತಾ ಇಲಾಖೆ ಪತ್ರ ಸಂಖ್ಯೆ: ವಾಇ/ವಾಪ್ರವಿ/ಸಿ-3/2013-14, ದಿನಾಂಕ: 04.01.2014.

ಪ್ರಸ್ತಾವನೆ:

**ಮೇಲೆ (1)ರಲ್ಲಿ ಓದಲಾದ ಅಧಿಸೂಚನೆಯಲ್ಲಿ** 11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಯನ್ನು ನಾಗರೀಕರಿಗೆ ಒದಗಿಸಲು, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 1ನೇ ಪ್ರಕರಣ (2) ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 27ನೇ ಫೆಬ್ರವರಿ 2012 ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಮಾರ್ಪಡಿಸಿ, ಕರ್ನಾಟಕ ಸರ್ಕಾರದ ದಿನಾಂಕ: 2ನೇ ಏಪ್ರಿಲ್ 2012ನ್ನು ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011, ಕರ್ನಾಟಕ ರಾಜ್ಯಾದ್ಯಂತ ಜಾರಿಗೆ ಬರುವ ದಿನಾಂಕದಂದು ಅಧಿಸೂಚನೆ ಹೊರಡಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (2) ರಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಅನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರೂ.5.00 ಕೋಟಿಗಳ ವೆಚ್ಚದಲ್ಲಿ ಕೆಲವು ಅಧಿಕಾರಿ ಸಿಬ್ಬಂದಿಯೊಂದಿಗೆ ಸಕಾಲ ಮಿಷನ್ ಅನ್ನು ರಚಿಸಿ ದಿನಾಂಕ: 06.03.2012ರಂದು ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ (3) ರಲ್ಲಿ ಆರ್ಥಿಕ ಇಲಾಖೆಯು ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೂಲಕ ಸಕಾಲ ಸೇವೆಗಳ ಅಧಿನಿಯಮದ ಪ್ರಚಾರ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಮೇಲೆ ಓದಲಾದ ಉಲ್ಲೇಖ (4)ರಲ್ಲಿ ವಾರ್ತಾ ಇಲಾಖೆಯವರು ಸಕಾಲ ಸೇವೆಗಳ ಅಧಿನಿಯಮದ ಸಾರ್ವತ್ರಿಕ ಪ್ರಚಾರ ಹಾಗೂ ಜನಜಾಗೃತಿಯ ನಿಟ್ಟಿನಲ್ಲಿ ಒಂದು ಮಾಧ್ಯಮ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಂತೆ ಕರ್ನಾಟಕ ರಾಜ್ಯಾದ್ಯಂತ ತಲುಪಲು ವಿವಿಧ ವಿದ್ಯುನ್ಮಾನ ವಾಹಿನಿಗಳಲ್ಲಿ ಒಟ್ಟು 11 ಟೆಲಿವಿಷನ್ ಚಾನೆಲ್‌ಗಳಲ್ಲಿ 30 ಸೆಕೆಂಡ್ ಅವಧಿಯ ಸಕಾಲ ಜಾಹೀರಾತುಗಳನ್ನು ಪ್ರತಿ ದಿನ 3 ಬಾರಿಯಂತೆ ಒಟ್ಟು 21 ದಿನಗಳಿಗೆ ತಗಲುವ ವೆಚ್ಚ ರೂ.1,03,58,127/- (ಒಂದು ಕೋಟಿ ಮೂರು ಲಕ್ಷದ ಐವತ್ತೆಂಟು ಸಾವಿರದ ನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ) ಹಾಗೂ 9 ವಿವಿಧ ರೇಡಿಯೋ ಚಾನೆಲ್‌ಗಳಲ್ಲಿ ಪ್ರತಿ ದಿನ 5 ಬಾರಿಯಂತೆ 28 ದಿನಗಳಿಗೆ ತಗಲುವ ವೆಚ್ಚ ರೂ.40,48,940/- (ನಲವತ್ತು ಲಕ್ಷದ ನಲವತ್ತೆಂಟು ಸಾವಿರದ ಒಂಭತ್ತು ನೂರ ನಲವತ್ತು ರೂಪಾಯಿಗಳು ಮಾತ್ರ) ಒಟ್ಟಾರೆ ರೂ.1,44,07,067/- (ಒಂದು ಕೋಟಿ ನಲವತ್ತ ನಾಲ್ಕು ಲಕ್ಷದ ಏಳು ಸಾವಿರದ ಅರವತ್ತೇಳು ರೂಪಾಯಿಗಳು ಮಾತ್ರ) ಪಾವತಿಸುವಂತೆ ಕೋರಿರುತ್ತಾರೆ.

----2

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 241 ನಾಸೇಖಾ 2013**

**ಬೆಂಗಳೂರು, ದಿನಾಂಕ: 04.02.2014**

ಸಕಾಲ ಸೇವೆಗಳ ಅಧಿನಿಯಮದ ಸಾರ್ವತ್ರಿಕ ಪ್ರಚಾರ ಹಾಗೂ ಜನಜಾಗೃತಿಯ ನಿಟ್ಟಿನಲ್ಲಿ ಒಂದು ಮಾಧ್ಯಮ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಂತೆ ಕರ್ನಾಟಕ ರಾಜ್ಯಾದ್ಯಂತ ತಲುಪಲು ವಿವಿಧ ವಿದ್ಯುನ್ಮಾನ ವಾಹಿನಿಗಳಲ್ಲಿ ಒಟ್ಟು 11 ಟೆಲಿವಿಷನ್ ಚಾನೆಲ್‌ಗಳಲ್ಲಿ 30 ಸೆಕೆಂಡ್ ಅವಧಿಯ ಸಕಾಲ ಜಾಹೀರಾತುಗಳನ್ನು ಪ್ರತಿ ದಿನ 3 ಬಾರಿಯಂತೆ ಒಟ್ಟು 21 ದಿನಗಳಿಗೆ ತಗಲುವ ವೆಚ್ಚ ರೂ.1,03,58,127/- (ಒಂದು ಕೋಟಿ ಮೂರು ಲಕ್ಷದ ಐವತ್ತೆಂಟು ಸಾವಿರದ ನೂರ ಇಪ್ಪತ್ತೇಳು ರೂಪಾಯಿಗಳು ಮಾತ್ರ) ಹಾಗೂ 9 ವಿವಿಧ ರೇಡಿಯೋ ಚಾನೆಲ್‌ಗಳಲ್ಲಿ ಪ್ರತಿ ದಿನ 5 ಬಾರಿಯಂತೆ 28 ದಿನಗಳಿಗೆ ತಗಲುವ ವೆಚ್ಚ ರೂ.40,48,940/- (ನಲವತ್ತು ಲಕ್ಷದ ನಲವತ್ತೆಂಟು ಸಾವಿರದ ಒಂಭತ್ತು ನೂರ ನಲವತ್ತು ರೂಪಾಯಿಗಳು ಮಾತ್ರ) ಒಟ್ಟಾರೆ ರೂ.1,44,07,067/- (ಒಂದು ಕೋಟಿ ನಲವತ್ತ ನಾಲ್ಕು ಲಕ್ಷದ ಏಳು ಸಾವಿರದ ಅರವತ್ತೇಳು ರೂಪಾಯಿಗಳು ಮಾತ್ರ) ಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಬಿಡುಗಡೆಗೊಳಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಮೇಲಿನ ವೆಚ್ಚವನ್ನು 2013-14ನೇ ಸಾಲಿನ ಲೆಕ್ಕಶೀರ್ಷಿಕೆ "2052-00-090-0-26-051 (ಯೋಜನೇತರ) ಅಡಿಯಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಆಇ 771 ವೆಚ್ಚ-12/13, ದಿನಾಂಕ: 27.09.2013ರಲ್ಲಿ ಸಹಮತಿಯಂತೆ ಆದೇಶ ಸಂಖ್ಯೆ: ಆಇ 04 ಟಿಎಫ್‌ಪಿ 2012, ದಿನಾಂಕ: 27.04.2012 ಹಾಗೂ ಎಫ್.ಡಿ. 01 ಟಿ.ಎಫ್.ಪಿ 2013, ದಿನಾಂಕ: 20.04.2013ರ ಸರ್ಕಾರದ ಆದೇಶದಲ್ಲಿ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಎನ್.ವರಪ್ರಸಾದ ರೆಡ್ಡಿ)
ಆಡಳಿತಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ
ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಡಳಿತ ಸುಧಾರಣೆ-ನಾಗರೀಕ ಸೇವೆಗಳು).

ಗೆ,

1. ಕರ್ನಾಟಕ ಮಹಾಲೇಖಪಾಲರು, (ಲೆಕ್ಕ ಮತ್ತು ಪರಿಶೋಧನೆ), ಕರ್ನಾಟಕ, ಬೆಂಗಳೂರು.

----3

2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಲೆಕ್ಕಪತ್ರ 1 ಮತ್ತು 2), ವಿಧಾನಸೌಧ, ಬೆಂಗಳೂರು.
4. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು.
5. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಸರ್ಕಾರ ಕಾರ್ಯದರ್ಶಿಗಳು, ಸಿಆಸುಇ (ಆಸು) ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು
8. ಅಪರ ಮಿಷನ್ ನಿರ್ದೇಕರು, ಸಕಾಲ ಮಿಷನ್, ಕೊಠಡಿ ಸಂಖ್ಯೆ: 210, ಬಹುಮಹಡಿ ಕಟ್ಟಡ.
9. ಜಂಟಿ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಸಿಆಸುಇ (ಆಸು), ಬಹುಮಹಡಿ ಕಟ್ಟಡ.
10. ನಿರ್ದೇಶಕರು, ವಾರ್ತಾ ಇಲಾಖೆ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.
11. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ/ವಾರದ ರಾಜ್ಯಪತ್ರ.